470(197) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ 2001–02, 2002–03 ಮತ್ತು 2003–04ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳಾವುವು?

ಆ) ಮೇಲ್ಕಂಡ ಅವಧಿಯಲ್ಲಿ ಖರ್ಚಾದ ಮೊತ್ತವೆಷ್ಟು?

ಇ) ಕಳಪೆ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದರೆ ಯಾವ ಕ್ರಮ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ)

ವರ್ಷ	ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ (ರೂ ಲಕ್ಷಗಳಲ್ಲಿ)
2001–02	06	8 35
2002–03	07	8.98
2003–04	23	29 19

ಆ)

ವರ್ಷ	ವೆಚ್ಚ (ರೂ ಲಕ್ಷಗಳಲ್ಲಿ)
2001–02	1 23
2002–03	8 39
2003–04	4 22

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ

471(199) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವ್ಯಾಸಂಗ ಮಾಡುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ

ಆ) ಪ್ರತಿ ಕೋರ್ಸಿಗೂ ಸೇರಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ

ಇ) 2004–05ನೇ ಶೈಕ್ಷಣಿಕ ವರ್ಷದಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ?

ಈ) ಗ್ರಂಥಾಲಯ ಮತ್ತು ಪ್ರಾಯೋಗಿಕ ಉಪಕರಣಗಳನ್ನು ಪಡೆಯಲಳ 2003–04ನೇ ವರ್ಷದಲ್ಲಿ ಆಗಿರುವ ವೆಚ್ಚದ ವಿವರ

ಉ) 2004–05ನೇ ಸಾಲಿಗೆ ಮಂಜೂರು ಮಾಡಬಹುದಾದ ಅನುದಾನ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಒಟ್ಟು 1198

ಆ) ಪ್ರಥಮ ಬಿ ಎಸ್ಸಿ 498

1) PCM 72
2) PMCs 45
3) PME 60

4)	CBZ	72
5)	CZM1	45
6)	CBM1	45
7)	BZP	72
8)	BIGs	60
9)	BISBt	20
10)	CBBt	60
11)	CZBt	60
12)	EBSt	20

ಇ) ಇಲ್ಲ

ಈ) 2003–04ನೇ ಸಾಲಿಗಾಗಿ ಗ್ರಂಥಾಲಯ ಪುಸ್ತಕಗಳ ಖರೀದಿಗಾಗಿ ರೂ 1,10,000/– ಗಳನ್ನು ಪ್ರಯೋಗಾಲಯ ಉಪಕರಣಗಳ ಖರೀದಿಗಾಗಿ ರೂ 2,25,000/–ಗಳ ವೆಚ್ಚ ಭರಿಸಲಾಗಿರುತ್ತದೆ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2003–04ನೇ ಸಾಲಿನಲ್ಲಿ ಯಾವುದೇ ವೆಚ್ಚಗಳನ್ನು ಭರಿಸಲಾಗಿರುವುದಿಲ್ಲ

ಉ) 2004–05ನೇ ಸಾಲಿಗೆ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ

472(450) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರತಿದಿನ ಸರಾಸರಿ ಉತ್ಪಾದನೆಯಾಗುವ ಹಾಲಿನ ಪ್ರಮಾಣವೆಷ್ಟು.

ಆ) ರಾಜ್ಯದಲ್ಲಿ ಹಾಲಿಗಾಗಿ ಇರತಕ್ಕ ಬೇಡಿಕೆ ಎಷ್ಟು

ಇ) ರಾಜ್ಯಕ್ಕೆ ಪ್ರತಿದಿನ ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವೆಷ್ಟು

ಈ) ಹೆಚ್ಚುವರಿ ಹಾಲನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಲಾಗುತ್ತಿದೆ

ಉ) ರಾಜ್ಯದಲ್ಲಿ ಹೆಚ್ಚು ಹಾಲಿನಮಡಿ ಉತ್ಪಾದನೆ ಘಟಕಗಳನ್ನು ಪ್ರಾರಂಭಿಸಲಾಗುವುದೇ,

ಊ) ರಾಜ್ಯಕ್ಕೆ ಹೊರರಾಜ್ಯಗಳಿಂದ ಬರತಕ್ಕ ಹಾಲಿನ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು

ಋ) ಕೆ ಎಂ ಎಫ್ ವತಿಯಿಂದ ಹಾಲಿನ ಪದಾರ್ಥಗಳನ್ನು ತಯಾರಿಸಲಾಗುತ್ತಿದೆಯೆ, (ಅದರ ವಿವರ ನೀಡುವುದು),

ಎ) ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳು, ಆಸ್ಪತ್ರೆಗಳು ಕಡ್ಡಾಯವಾಗಿ ಕೆ ಎಂ ಎಫ್ ನಿಂದಲೇ ಹಾಲನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದೆಯೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಜಿಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಜುಲೈ ಮೊದಲ ವಾರದಲ್ಲಿ ದಿನವಹಿ ಸರಾಸರಿ 27 75 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗಿದೆ

ಆ) ಜುಲೈ ಮೊದಲ ವಾರದಲ್ಲಿ ಒಕ್ಕೂಟಗಳ ಮುಖಾಂತರ ದಿನವಹಿ ಸರಾಸರಿ 15 56 ಲಕ್ಷ ಲೀಟರ್ ಹಾಲು ಮಾರಾಟವಾಗಿರುತ್ತದೆ